ಈ ಬಗ್ಗೆ ಸುದೀರ್ಘವಾದ ಚರ್ಚೆಯ ನಂತರ ಆಂಧ್ರಪ್ರದೇಶ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರು ಈಗಾಗಲೇ ನಾಗಾರ್ಜುನ ಸಾಗರದಲ್ಲಿ 3 ಜನರೇಟರುಗಳನ್ನು ಸಿಂಕ್ರೊನಸ್ ಕಂಡೆಂಸರ್‌ಗಳಾಗಿ ಓಡಿಸುತ್ತಿರುವುದಾಗಿ ತಿಳಿಸಿದರು. ಹಾಗಾಗಿ ಇನ್ನೂ ಎರಡು ಜನರೇಟರ್‌ಗಳನ್ನು ಸಿಂಕ್ರೊನಸ್ ಕಂಡೆಂಸರ್‌ಗಳಾಗಿ ಓಡಿಸಲು ಒಪ್ಪಿಕೊಂಡರು. ಮತ್ತು ಕೆಲವೇ ದಿನಗಳಲ್ಲಿ ಮತ್ತೊಂದು ಜನರೇಟರನ್ನು ಸಿಂಕ್ರೊನಸ್ ಕಂಡೆಂಸರ್ ಆಗಿ ಓಡಿಸುವುದಾಗಿ ತಿಳಿಸಿದರು. ಇದರ ಜೊತೆಗೆ ಶ್ರೀಶೈಲಂನಲ್ಲಿ 100 ಮೆ. ವ್ಯಾ. ಹೆಚ್ಚಿನ ಉತ್ಪಾದನೆಯನ್ನು ಮಾಡುವುದಾಗಿಯೂ ಮತ್ತು ಇದರಿಂದ ನಾಗಾರ್ಜುನ ಸಾಗರ-ಕಡಪ-ಸೋಮನಹಳ್ಳಿ 400 ಕೆ. ವಿ. ಲೈನ್ ಮೇಲೆ ಹೊರೆ ಕಡಿಮೆಯಾಗುವುದೆಂದು ತಿಳಿಸಿದರು.

ಈ ಎಲ್ಲಾ ತುರ್ತು ಕ್ರಮದಿಂದ ಹಳ್ಳಿಯ 400 ಕೆ. ವಿ. ಸ್ಟೀಕರಣ ಕೇಂದ್ರದಲ್ಲಿ ವಿದ್ಯುತ್ ವೋಲ್ಟೇಜ್ ಸುಮಾರು 15 ರಿಂದ 20 ಕೆ. ವಿ. ಹೆಚ್ಚುವುದು ಮತ್ತು ರಾಜ್ಯದ ಗ್ರಾಮಾಂತರ ಜಿಲ್ಲೆಗಳಾದ ಕೋಲಾರ, ತುಮಕೂರು ಮತ್ತು ಬೆಂಗಳೂರಿನ ರೈತರುಗಳ ಕಷ್ಟವು ಸ್ವಲ್ಪ ಕಡಿಮೆಯಾಗುವುದು.

ಶ್ರೀ ಸಿ. ಬೈರೇಗೌಡ : ಈ ಸದನದ ಸಮಿತಿ ಈ ವಿಚಾರದಲ್ಲಿಯೇ ತುರ್ತಾಗಿ ಸುಮಾರು ಮೂರು ಸಭೆಗಳನ್ನು ಮಾಡಿ ಅದು ಒಂದು ವರದಿಯನ್ನು ಕೊಟ್ಟಿದೆ, ಆ ವರದಿಯ ಬಗ್ಗೆ ಮಾನ್ಯಮಂತ್ರಿಗಳು ಏನೂ ಹೇಳುತ್ತಿಲ್ಲ. ಆದ್ದರಿಂದ ನಾನು ಪುನಃ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ಆ ವರದಿಯನ್ನು ದಯವಿಟ್ಟು ಒಪ್ಪಿಕೊಳ್ಳಿ; ಒಪ್ಪಿಕೊಂಡು ಅಲ್ಲಿ ಹೈಟೆನ್‌ಷನ್‌ಗೆ ಶೇಕಡ 5ರಷ್ಟು ವಿದ್ಯುತ್ ಕಡಿತವನ್ನು ಹೆಚ್ಚುಮಾಡಿ ಎನ್ನುವ ಒಂದು ರೆಕಮೆಂಡೇಷನ್ ಮಾಡಿ, ಇವತ್ತು ವ್ಯವಸಾಯದ ಪರಿಸ್ಥಿತಿಯ ಬಗ್ಗೆ ಸಹ ಹೇಳಿದ್ದೇನೆ. ಇದರಿಂದ ವ್ಯವಸಾಯಗಾರರಿಗೆ, ರೈತರಿಗೆ ಅನ್ಯಾಯವಾಗುತ್ತಿರತಕ್ಕಂಥದ್ದು ಒಂದು ವಿಧವಲ್ಲ, ನೂರಾರು ವಿಧದಿಂದ ಅನ್ಯಾಯವಾಗುತ್ತಿದೆ. ಇವತ್ತು ಹಳ್ಳಿಯ ಕಡೆ ಅನೇಕ ಪ್ರದೇಶಗಳ 6 ರಿಂದ 12 ಗಂಟೆಯವರೆಗೆ ವಿದ್ಯುತ್‌ಚ್ಛಕ್ತಿ ಇರುವುದಿಲ್ಲ. ಬೆಂಗಳೂರಿನಲ್ಲಿ ಕೇವಲ 45 ನಿಮಿಷ ಮಾತ್ರ ವಿದ್ಯುಚ್ಛಕ್ತಿಯನ್ನು ನಿಲುಗಡೆ ಮಾಡುತ್ತಿದ್ದೀರಿ, ಇದು ಯಾವ ಧರ್ಮ? ನೀವು ಕಾನೂನು ಮತ್ತೊಂದನ್ನು ಬಿಟ್ಟುಬಿಡಿ, ನಿಮಗೆ ಇದು ನ್ಯಾಯನಾ? ಧರ್ಮನಾ? 2 ಗಂಟೆ ಅಲ್ಲಿ ನಿಲ್ಲಿಸುತ್ತೀರಿ; 45 ನಿಮಿಷ ಇಲ್ಲಿ ನಿಲ್ಲಿಸುತ್ತೀರಿ, ಈ ರೀತಿ ಅನ್ಯಾಯ ಏತಕ್ಕೆ ಮಾಡುತ್ತಿದ್ದೀರಿ. ನಾನು ಮೊದಲು ಒಂದು ಸಾರಿ ಬಹಳ ದುಃಖದಿಂದ ಈ ಮಾತನ್ನು ಹೇಳಿದ್ದೆ. ಆ ಮಾತನ್ನು ಇವತ್ತು ಕೂಡ ಬಳಸಬೇಕೆಂದು ಅನ್ನಿಸುತ್ತದೆ. ಈ ಸರ್ಕಾರ ಅಲ್ಲ, ಎಲ್ಲಾ ಸರ್ಕಾರಗಳಲ್ಲಿಯೂ ಕೂಡ ಏನಾಗುತ್ತಿದೆ ಅಂದರೆ ಹಳ್ಳಿಯವರು ಅಂದರೆ, ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಈ ಅನ್ಯಾಯವನ್ನು ಏತಕ್ಕೆ ಮಾಡುತ್ತಿದ್ದೀರಿ, ಆದ್ದರಿಂದ ಈ ಅನ್ಯಾಯವನ್ನು ಸರಿಪಡಿಸಬೇಕೆಂದು ಈ ಸದನದ ಮೂಲಕ ಹೇಳುತ್ತೇನೆ. ತಕ್ಷಣದಿಂದ ವಿದ್ಯುತ್ ಸರಬರಾಜನ್ನು ಜಾರಿಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಮತ್ತೊಂದು ಸಾರಿ ವಿನಂತಿಮಾಡುತ್ತೇನೆ.

ಶ್ರೀಮತಿ ಮೋಟಮ್ಮ : ನಿಮಗೆ ಬೇರೆ ಉದಾಹರಣೆಗೆ ಸಿಗಲಿಲ್ಲವಾ?

ಶ್ರೀ ಸಿ. ಬೈರೇಗೌಡ : ಹಾಗಿದ್ದರೆ ನಮ್ಮ ಊರಿನ ಭಾಷೆಯಲ್ಲಿ ಹೇಳಬೇಕಾಗುತ್ತದೆ. ಹೇಳಬೇಕು ಅಂದರೆ ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಆ ಶಬ್ದವನ್ನು ವಾಪಸ್ಸು ತೆಗೆಸಿಬಿಡಿ. ಏಕೆಂದರೆ ಇಲ್ಲಿ ರೈತರನ್ನು ಈ ಶಬ್ದದಿಂದ ತೃಪ್ತಿಪಡಿಸುವುದಿಲ್ಲ. ಮಾನ್ಯ ಬೈರೇಗೌಡರು ಬಹಳ ಒಳ್ಳೆಯ ಭಾಷೆಯಲ್ಲಿ ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ : ನಮ್ಮ ಹಳ್ಳಿಯಲ್ಲಿ ಏನು ಭಾಷೆಯನ್ನು ಉಪಯೋಗಿಸಿರುತ್ತಾರೆ. ಆ ಭಾಷೆಯಲ್ಲಿ ಹೇಳಬೇಕು ಅಂದರೆ ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಅವರು ಬಳಸಿದ ಭಾಷೆ ಸರಿಯಲ್ಲ. ಅದನ್ನು ಕಡತದಿಂದ ತೆಗೆದು ಹಾಕಿಸಿ.

ಶ್ರೀ ಸಿ. ಬೈರೇಗೌಡ : ನನ್ನನ್ನು ನಾನು ನಿಂದಿಸಿಕೊಳ್ಳುವುದಕ್ಕೆ ತಯಾರಾಗಿಲ್ಲ. ಆದರೆ ಇವತ್ತು ಪರಿಸ್ಥಿತಿ ಆ ರೀತಿ ಇದೆ.

ಉಪಾಧ್ಯಕ್ಷರು : ಆ ಪದವನ್ನು ಕಡತದಿಂದ ತೆಗೆದುಹಾಕಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಲತಾಯಿ ಧೋರಣೆಯನ್ನು ರೈತರ ಮೇಲೆ ಗ್ರಾಮೀಣ ಜನರ ಮೇಲೆ ಅನುಸರಿಸುತ್ತಿದ್ದಾರೆ, ಅನ್ನುವುದಕ್ಕಾಗಿ ಆ ಮಾತನ್ನು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ : ಅದು ಬಿ.ಜೆ.ಪಿ. ಭಾಷೆ. ನಮ್ಮ ಭಾಷೆ ಅಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ : ಭಾಷೆ ಬಿ.ಜೆ.ಪಿ.ಯದ್ದು ಧೋರಣೆ ಕಾಂಗ್ರೇಸ್ಸಿನದ್ದು.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಉಪಮುಖ್ಯಮಂತ್ರಿಯವರೇ, ತಾವು ಹೈದರಾಬಾದ್ ಮುಖ್ಯಮಂತ್ರಿಯವರ ಹತ್ತಿರ ಮಾತನಾಡಿಕೊಂಡು ಬಂದಿದ್ದೀರಿ; ಅವರು ಹೇಳಿದ್ದು ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ನೋಡಿದ್ದೇನೆ. ಅದರ ರಿಸಲ್ಟ್ ಏನು?

ಶ್ರೀ ಎಸ್. ಎಂ. ಕೃಷ್ಣ : ಸುಮಾರು 20 ಕಿ.ಲೋ. ವಾಟ್ಸ್ ಜಾಸ್ತಿಯಾಗುತ್ತದೆ. ಅಷ್ಟಾದರೆ ನಮಗೆ ಸಾಕು. ಈಗ 318-320 ಬರುತ್ತಿದೆ, ನಮಗೆ 350 ರಷ್ಟು ಬಂದರೂ ಕೂಡ ಈಗ fluctuations ಅನುಭವಿಸುತ್ತಿರುವುದನ್ನು ತಡೆಯಬಹುದು, ಆದ್ದರಿಂದ ಅಷ್ಟು ಉಪಕಾರವನ್ನು ಮಾಡಿಕೊಡಿ ಎಂದು ಕೇಳಿದ್ದೇವೆ. ಅವರಿಂದ ನಾವು ಹೆಚ್ಚು ಕೇಳಲಿಲ್ಲ. ನಮಗೆ ಏನು ಸೆಂಟ್ರಲ್ ಇನ್‌ಸ್ಟ್ಯಾಲೇಷನ್ ಬರಬೇಕೋ ಅದರಲ್ಲಿ ಬರತಕ್ಕಂಥ ಕ್ವಾಲಿಟಿ ಆಫ್ ಪವರನ್ನು ಮೈನ್‌ಟೈನ್ ಮಾಡಿ, ವೋಲ್ಟೇಜ್ ಮಾಡಿದರೆ ಸಾಕು. We are tail enders ಆದ್ದರಿಂದ ಏನು ಬವಣೆಯನ್ನು

ಅನುಭವಿಸಬೇಕೋ ಆ ಭವಣೆಯನ್ನು ಇವತ್ತು ತುಮಕೂರು, ಕೋಲಾರ, ಬೆಂಗಳೂರು ಜಿಲ್ಲೆ ಮತ್ತು ಚಿತ್ರದುರ್ಗ ಜಿಲ್ಲೆಯ ರೈತಾಪಿ ಜನಗಳು ಅನುಭವಿಸುತ್ತಿದ್ದಾರೆ. ಅದನ್ನು ಸ್ವಲ್ಪ ಸುಧಾರಣೆ ಮಾಡಬೇಕೆಂದು ಹೇಳಿ ಹೈದರಾಬಾದಿನಲ್ಲಿ ನಡೆದ ಪ್ರಯತ್ನದಿಂದಾಗಿ ಇನ್ನು 2-3 ದಿವಸದಲ್ಲಿ ಅದರ ಸುಧಾರಣೆ ಯಾವ ಮಟ್ಟದಲ್ಲಿ ಆಗಬಹುದು ಎನ್ನತಕ್ಕದ್ದು ನಮಗೆ ಗೊತ್ತಾಗುತ್ತದೆ. ಇನ್ನು ಸದನದ ಸಮಿತಿಯಲ್ಲಿ ಮಾಡಿರತಕ್ಕಂಥ ಶಿಫಾರಸ್ಸುಗಳು, ಈ ಶಿಫಾರಸ್ಸುಗಳಿಂದ ನಮ್ಮ ಸಂಸ್ಥೆಯ ಪರಿಣಿತರ ಪ್ರಕಾರ ಯಾವ ವಿಧವಾದಂಥ ಅನುಕೂಲ, ಸುಧಾರಣೆ ಕೂಡ ಬೆಂಗಳೂರು, ತುಮಕೂರು ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಆಗುವುದಿಲ್ಲ ಎನ್ನತಕ್ಕದ್ದು ಅವರ ಪರಿಣತರ ಅಭಿಪ್ರಾಯವಾಗಿದೆ. ಆದರೆ ಸದನದ ಸಮಿತಿಯವರು ಒಂದು ಜವಾಬ್ದಾರಿಯನ್ನು ನಮಗೆ ಕೊಟ್ಟಮೇಲೆ ಆ ಸದನದ ಸಮಿತಿಯವರು ಏನೇ ಶಿಫಾರಸ್ಸುಗಳನ್ನು ಮಾಡಿದರೂ ಕೂಡ ಅದಕ್ಕೆ ಅತ್ಯಂತ ಹೆಚ್ಚಿನ ಗೌರವವನ್ನು ನಾವು ಕೊಡಬೇಕಾಗುತ್ತದೆ. ಅದಕ್ಕೋಸ್ಕರ ಈಗ ಹಾಲಿ ಕೈಗಾರಿಕೆಗಳಿಗೆ ಹೈಷರ್‌ಟೆನ್ಸ್ ಬಳಕೆದಾರರಿಗೆ ವಿಧಿಸಿರುವ ಎನರ್ಜಿ ಕಟ್ ಶೇಕಡ 60 ಇದ್ದುದ್ದನ್ನು ಶೇಕಡ 65 ಮಾಡುತ್ತೇನೆ. ಈಗ ಡಿಮ್ಯಾಂಡ್ ಕಟ್ಟನ್ನು ಮಾಡಬೇಕೇ ಬೇಡವೇ ಎನ್ನತಕ್ಕಂಥದ್ದನ್ನು ಇನ್ನೊಂದು 3-4 ದಿವಸವಾದ ಮೇಲೆ ಹೈದರಾಬಾದ್ ಭೇಟಿಯ ಫಲ ಯಾವ ರೀತಿ ಆಗುತ್ತದೆ ಎನ್ನುವುದನ್ನು ನೋಡಿ ನಾವು ಯೋಚನೆ ಮಾಡುತ್ತೇವೆ. ಇನ್ನು ಲೋಡ್ ಷೆಡ್ಡಿಂಗ್ ವಿಚಾರ, ಇದು ಕೇವಲ ಬೆಂಗಳೂರು ಒಂದರಲ್ಲೇ ಅಲ್ಲ, ಎಲ್ಲಾ ಪಟ್ಟಣ ಪ್ರದೇಶಗಳಲ್ಲಿಯೂ ಕೂಡ ಲೋಡ್ ಷೆಡ್ಡಿಂಗ್‌ನ್ನು ಗ್ರಾಮಾಂತರ ಪ್ರದೇಶಗಳಿಗೂ ಮತ್ತು ಪಟ್ಟಣ ಪ್ರದೇಶಗಳಿಗೂ ಒಂದು ಗೆರೆಯನ್ನು ಎಳೆದಿದ್ದೇವೆ, ನಿಜ, ನಾನು ಇಬ್ಬರನ್ನು ಕೂಡ ಸಮತೂಕದ ದೃಷ್ಟಿಯಿಂದ ನೋಡಬೇಕೆಂದು ತಮ್ಮ ಕಳಕಳಿ ಏನಿದ ಅದೇ ಕಳಕಳಿ ನನಗೂ ಕೂಡ ಇದೆ. ಆದರೆ ಗ್ರಾಮಾಂತರ ಪ್ರದೇಶದ ರೈತರೇ ಪಟ್ಟಣ ಪ್ರದೇಶಗಳಿಗೆ ಬರತಕ್ಕಂಥವರು. ಈಗ ಚಿಕ್ಕಬಳ್ಳಾಪುರಕ್ಕೆ ಪ್ರತಿನಿತ್ಯ ಹಳ್ಳಿಗಳಿಂದ ಎಷ್ಟು ಜನ ಬರುತ್ತಾರೆ, ಚಿಂತಾಮಣಿಗೆ ಎಷ್ಟು ಜನ ಬರುತ್ತಾರೆ, ಶಿಡ್ಲಘಟ್ಟಕ್ಕೆ ಎಷ್ಟು ಜನ ಬರುತ್ತಾರೆ.

ಶ್ರೀ ಸಿ. ಬೈರೇಗೌಡ : ಅವರು ಅಲ್ಲಿಗೆ ಕರೆಂಟ್‌ಗೋಸ್ಕರ ಬರುವುದು.

ಶ್ರೀ ಎಸ್. ಎಂ. ಕೃಷ್ಣ : ಕರೆಂಟ್ ಕೊರತೆಯ ಬಗ್ಗೆ ನನ್ನದು ಯಾವುದೇ ವಾದ ಇಲ್ಲ. ಅದನ್ನು ನೇರ ಒಪ್ಪಿಕೊಂಡು ಬಿಟ್ಟಿದ್ದೇನೆ. ಅದನ್ನು ಭಾಗಶಃ, ರಿಪೇರಿ ಮಾಡಬೇಕು, ಅದನ್ನು ನವೀಕರಣ ಮಾಡಬೇಕು, ಇದಕ್ಕೆ ಸ್ವಲ್ಪ ಸಮಯ ಬೇಕು. ಆದರೆ ಈ ತಿಂಗಳು ಬಹಳ ಸೂಕ್ಷ್ಮವಾದಂತಹ ತಿಂಗಳು, ಮತ್ತು ಮುಂದಿನ ತಿಂಗಳು 15ನೇ ತಾರೀಖಿನವರೆಗೂ ಬಹಳ ಸೂಕ್ಷ್ಮವಾಗಿರುತ್ತದೆ. ಒಂದೂವರೆ ತಿಂಗಳಲ್ಲಿ ನಾವು ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿ ಸ್ವಲ್ಪಮಟ್ಟಿಗೆ ಸುಧಾರಣೆಯನ್ನು ತರುವುದಕ್ಕೆ ಸಾಧ್ಯವಾದರೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇನೆ. ನಗರ ಪ್ರದೇಶಗಳಲ್ಲಿ 45 ನಿಮಿಷಗಳೆಂದು ತಾವು ಹೇಳಿದ್ದೀರಿ, ಅದನ್ನು ಒಂದು ಗಂಟೆಗೆ ಹೆಚ್ಚಿಸಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಈಗ ಒಂದು ಗಂಟೆಯಾಯಿತು, ಅಥವಾ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋದರೆ ಅದನ್ನು ಒಂದೂವರೆ ಗಂಟೆ ಬೇಕಾದರೂ ಮಾಡಿಸೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಲೋಡ್ ಷೆಡ್ಡಿಂಗ್ ಮೂರು ಗಂಟೆಯನ್ನಾದರೂ ಮಾಡಿ ಅಂತ ನಾವು ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ, ಇದರಿಂದ ಯಾವ ಗಂಡಾಂತರವು ಯಾವ ನಗರದ ಮೇಲೆ ಆಗುವುದಿಲ್ಲ, ಮೊದಲೆಲ್ಲಾ ಮಾಡಿಕೊಂಡು ಬಂದಿದ್ದರು, ಈಗ ಎರಡು ವರ್ಷದಿಂದ ಮಾತ್ರ ಮಾಡಿಲ್ಲ. ಇವತ್ತು ನಮ್ಮ ಜಿಲ್ಲೆಯ ಹಳ್ಳಿಗಳಲ್ಲಿ 12 ಗಂಟೆ ಪವರ್ ಇರುವುದಿಲ್ಲ. ರಾತ್ರಿ 6ಗಂಟೆಗೆ ಪವರ್ ಇರುವುದಿಲ್ಲ. ಬೆಳಿಗ್ಗೆ 6 ಗಂಟೆ ಪವರ್ ಇರುವುದಿಲ್ಲ. ರಾತ್ರಿ 6 ಗಂಟೆಯಲ್ಲಾದರೂ ನಮಗೆ 3 ಗಂಟೆ ಎರಡು ಫೀಡರ್ ಮೇಲೆ ಸ್ಪ್ಲಿಟ್ ಮಾಡುವುದಕ್ಕೆ ಕೊಡಿ, 3 ಗಂಟೆ ನೀವು ಟೌನ್ಸ್ ಮೇಲಾದರೂ ಲೋಡ್ ಶೆಡ್ಡಿಂಗ್ ಇಡಿ ಎಂದು ಕೇಳಿದಾಗ ಅದಕ್ಕೆ ನಿಮ್ಮ ಇಲಾಖೆಯವರು ಒಪ್ಪಿಕೊಂಡಿದ್ದಾರೆ. ಅವರು ಎಲ್ಲಾ ಸಿಟಿಯಲ್ಲಿ ಬದುಕುವವರು, ನಮ್ಮ ದುರಂತ ನಾವು ಹಳ್ಳಿಯಲ್ಲಿ ಬದುಕಿದ್ದೇವೆ. ಅರ್ಬನ್‌ನೈಸ್ ಲೈಫ್‌ನಲ್ಲಿರುವವರಿಗೆ ತಾವು ಸಪೋರ್ಟ್ ಮಾಡುವುದಾದರೆ ಈ ಕಮಿಟಿನೇ ಬೇಕಿಲ್ಲ. ಇದನ್ನೆಲ್ಲ ಮೊದಲೆಲ್ಲಾ ಮಾಡಿಕೊಂಡು ಬಂದಿರುವುದು, ಎಂದಿಗೂ ಮಾಡದೇ ಇರುವಂತಹ ಕೆಲಸವನ್ನು ನಾವು ಕೇಳಿಲ್ಲ, ಅವರನ್ನೇ ತಾವು ಕರೆಸಿ ಕೇಳಿ; Load-Schedding was there 3 ಗಂಟೆ, 6 ಗಂಟೆ ಅವರಿಗೂ ಇತ್ತು. ಆಸ್ಪತ್ರೆ ಇತ್ತು, ಎಮರ್ಜೆನ್ಸಿ ಇತ್ತು ಅಂದರೆ ಅವರಿಗೆ ಪ್ಲಾನ್ ಮಾಡಿ 3 ಗಂಟೆ ಆಪರೇಶನ್ ಬೇಡ ಅಂತ ಹೇಳುವುದಕ್ಕೆ ಆಗುವುದಿಲ್ಲವಾ? ತಾವು ಲೋಡ್‌ಶೆಡ್ಡಿಂಗ್‌ಗೆ ಅವಕಾಶವನ್ನು ಮಾಡಲೇ ಬೇಕಾಗುತ್ತದೆ. ಇಲ್ಲದಿದ್ದರೆ ನಾವು ಬದುಕುವುದಕ್ಕೆ ಆಗುವುದಿಲ್ಲ. ನಮಗೆ 12-14 ಗಂಟೆ ಪವರ್ ಇಲ್ಲ, ಬೇಕಾದರೆ ನೀವು ರಿಪೋರ್ಟನ್ನು ತರಿಸಿಕೊಂಡು ನೋಡಿ. ತುಮಕೂರಿನಲ್ಲಿ ಬೆಳಿಗ್ಗೆ 6 ಗಂಟೆ ರಾತ್ರಿ 6 ಗಂಟೆ, ಒಟ್ಟು 12 ಗಂಟೆ ಪ್ರತಿದಿನ ಪವರ್ ಕಟ್ಟಾಗುತ್ತದೆ. ಈ ಸಮಯದಲ್ಲಿಯೂ ವೋಲ್ಟೆಜ್ ಇಲ್ಲ. ಅದನ್ನು ಏನಾದರೂ ಸ್ವಲ್ಪ ಸ್ಟೆಬಿಲೈಸ್ ಮಾಡಿ. 6 ಗಂಟೆ ಎಂದು ನೀವು ಸ್ಟೇಟ್ ಪಾಲಿಸಿಯನ್ನು ಹೇಳಿಬಿಟ್ಟು 12 ಗಂಟೆ ಕಟ್ ಮಾಡುತ್ತಿದ್ದೀರಿ, ಸ್ಕ್ಯಾಗರಿಂಗ್ ಪವರ್ ಕಟ್ ಅನ್ನು ರೆಡ್ಯೂಸ್ ಮಾಡಿ ಎಂದು ಕೇಳಿದ್ದೇವೆ. ಅದನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ : ನಾನು ಈಗ ಒಂದೂವರೆ ಗಂಟೆ ಎಂದು ಹೇಳುತ್ತಿದ್ದೇನೆ. ಮತ್ತೆ ಸದನದ ಸಮಿತಿಯ ಸೋಮವಾರ, ನಾವು ನೀವು ಇದನ್ನು ಹೇಗೆ ಮಾಡಬಹುದು ಎನ್ನತಕ್ಕದ್ದನ್ನು ಸದನದ ಸಮಿತಿಯಲ್ಲಿ ಕುಳಿತುಕೊಂಡು ತೀರ್ಮಾನ ಮಾಡೋಣ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮಂತ್ರಿಗಳು ಇನ್ನೂ ಎರಡು ಸ್ಟೇಟ್‌ಮೆಂಟ್ ಅನ್ನು ಮಾಡಬೇಕು, ಅದನ್ನು ಮಾಡಲಿ.

(ಆ) ವಿಷಯ : ಬಳಕೆದಾರರಿಂದ ಹೆಚ್ಚುವರಿ 3 ತಿಂಗಳ ಕನಿಷ್ಟ ಠೇವಣಿ ಸಂಗ್ರಹಣೆ ಕುರಿತು.

ಶ್ರೀ ಎಸ್.. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1948ರ ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮ ಮೇರೆಗೆ ಮಂಡಳಿಯು ವಿದ್ಯುತ್ ಸರಬರಾಜು ಮಾಡಿದ್ದುಕ್ಕಾಗಿ ಭದ್ರತೆಯಾಗಿ ಬಳಕೆದಾರರಿಂದ ಕನಿಷ್ಠ ಠೇವಣಿ ಹೊಂದಲು ಅವಕಾಶವಿದೆ. 1978ರಲ್ಲಿ 2 ತಿಂಗಳ ಬಿಲ್ಲುಗಳಿಂದ 3 ತಿಂಗಳ ಬಿಲ್ಲುಗಳಷ್ಟು ಠೇವಣಿಯನ್ನು ಸಂಗ್ರಹಿಸುವಂತೆ ಸರ್ಕಾರವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಆದೇಶ ನೀಡಿತು. ಹೀಗೆ ಮಾಡಲು ಕಾರಣವೇನೆಂದರೆ, ಬಳಕೆದಾರರಿಗೆ ಮುಂಗಡವಾಗಿ ಮಾರಾಟ ಮಾಡುವ ವಸ್ತುವೆಂದರೆ ವಿದುಚ್ಛಕ್ತಿ ಮಾತ್ರವಾಗಿದ್ದು ಅವರು ಬಳಸಿದ ಒಂದು ತಿಂಗಳ ನಂತರ ಬಿಲ್ಲು ಸಿದ್ಧಪಡಿಸಲಾಗುವುದು. ಹಾಗೆಯೇ ಬಿಲ್ಲನ್ನು ಸಿದ್ಧಪಡಿಸಿದ ನಂತರ ಹಣ ಪಾವತಿ ಮಾಡಲು ಕನಿಷ್ಟ 22 ದಿನಗಳ ಕಾಲಾವಕಾಶ ನೀಡಲಾಗುವುದು, ಹಾಗಾಗಿ ಬಳಕೆದಾರರಿಗೆ ಬಿಲ್ಲನ್ನು ಪಾವತಿ ಮಾಡಲು ಸುಮಾರು ಎರಡು ತಿಂಗಳ ಕಾಲಾವಕಾಶ ದೊರೆತಂತಾಗುವುದು. ಹಾಗೆಯೇ, ಇದೇ ಅವಧಿಯಲ್ಲಿ ಬಳಕೆದಾರರು ಮತ್ತೊಂದು ತಿಂಗಳ ವಿದ್ಯುತ್ತನ್ನು ಬಳಸುವರು.

ಹೀಗೆ ಸಂಗ್ರಹಿಸಲಾದ ಠೇವಣಿಯು ವರ್ಷದ ಜನವರಿ ಮತ್ತು ಅಕ್ಟೋಬರ್ ತಿಂಗಳುಗಳ ಮಧ್ಯದಲ್ಲಿ ಬಳಸಲಾದ ಗರಿಷ್ಠ ಮಾಸಿಕ ಬಿಲ್ಲು ಮೊಬಲಗಿನ ಮೂರರಷ್ಟಕ್ಕಿಂತ ಕಡಿಮೆಯಾದಲ್ಲಿ ಹೆಚ್ಚುವರಿ ಭದ್ರತಾ ಠೇವಣಿಯನ್ನು ಸಂಗ್ರಹಿಸಲಾಗುವುದು.

ಮಾಸಿಕ ಕನಿಷ್ಠ ಠೇವಣಿಯನ್ನು 2 ತಿಂಗಳುಗಳಿಂದ 3 ತಿಂಗಳಿಗೆ ಪರಿಷ್ಕರಿಸಿದ್ದನ್ನು ಕರ್ನಾಟಕದ ಉಚ್ಚನ್ಯಾಯಾಲಯವು ಸ್ಥಿರಪಡಿಸಿದೆ, ಹಾಗೆಯೇ ಠೇವಣಿ ಮೊಬಲಗು 100 ರೂಪಾಯಿಗಳಿಗಿಂತಲೂ ಹೆಚ್ಚು ಇದ್ದಲ್ಲಿ ಅಂತಹ ಠೇವಣಿಗಳಿಗೆ ಶೇ.10 ಬಡ್ಡಿನೀಡುವಂತೆ ಆದೇಶಿಸಿದ್ದು ಇದನ್ನು ಜಾರಿಗೆ ತರಲಾಗಿದೆ.

ಗೃಹ ಬಳಕೆ ಮತ್ತು ಸರ್ವ ವಿದ್ಯುತ್ ಗೃಹಗಳ ಪ್ರವರ್ಗದಲ್ಲಿ ಸುಮಾರು 43 ಲಕ್ಷ ಸ್ಥಾವರಗಳು ಇರುವುದರಿಂದ ಈ ಪ್ರವರ್ಗಗಳಿಗೆ ಪ್ರತಿ ವರ್ಷ ಮಾಡಲಾಗುವ ಪರಿಷ್ಕರಣೆಯಿಂದ ಸಂಗ್ರಹವಾಗುವ ಠೇವಣಿ ಮೊಬಲಗು ಬಹಳ ಕಡಿಮೆ ಅಲ್ಲದೆ ಮಂಡಳಿ ಆಡಳಿತಾತ್ಮಕ ತೊಂದರೆ ಉಂಟಾಗುವುದರಿಂದ ಮತ್ತು ಇದರಿಂದ ಬಳಕೆದಾರರಿಗೂ ಅನಾನುಕೂಲ ಉಂಟಾಗುತ್ತಿರುವುದರಿಂದ ಈ ಪ್ರವರ್ಗಗಳ ಬಳಕೆದಾರರಿಂದ ಹೆಚ್ಚುವರಿ ಠೇವಣಿಯನ್ನು ಐದು ವರ್ಷಗಳಿಗೊಮ್ಮೆ ಸಂಗ್ರಹಿಸುವಂತೆ ಮಂಡಳಿಗೆ ಅಗತ್ಯ ಆದೇಶ ನೀಡಲು ಸರ್ಕಾರವು ತೀರ್ಮಾನಿಸಿದೆ.

*ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಇಲ್ಲಿ ನಾನು 2-3 ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೆ. ಆ ದಿವಸ ಮಾನ್ಯ ಉಪ ಮುಖ್ಯ ಮಂತ್ರಿಗಳು ಇರಲಿಲ್ಲ, ಇವತ್ತು ನಿಮಗೆ ಮನಾಪಲಿ ಕೆ.ಇ.ಬಿ.ಯಲ್ಲಿ ಇದೆ. ತಾವು ಏನು